# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸನಗರ

## ಸಿ.ಸಿ. ನಂ. 56/2019

**ಚಾಸಾ–11 ಪ್ರಾಸಾ–9**

| | | |
|---|---|---|
| ಹೆಸರು | – | ಈರೇಶ ಈ.ಆರ್ |
| ತಂದೆಯ ಹೆಸರು | – | ಇಂಡುವಳ್ಳಿ ರಾಮಪ್ಪ |
| ವಯಸ್ಸು | – | 43 ವರ್ಷ |
| ವೃತ್ತಿ | – | ಪೊಲೀಸ್ ಮುಖ್ಯ ಪೇದೆ |
| ವಾಸಸ್ಥಳ | – | ಹೊಸನಗರ. |

(ದಿನಾಂಕಃ **19.06.2025** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ**

1. ನಾನು 2014 ರಿಂದ 2019 ವರೆಗೆ ನಗರ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 20.11.2018 ರಂದು ಸದರಿ ಪ್ರಕರಣದ ಕಡತವನ್ನು ಚಾಸ 10 ರವರಿಂದ ಪಡೆದುಕೊಂಡು ಈ ಪ್ರಕರಣದ ತನಿಖೆಯನ್ನು ಮುಂದುವರಿಸಿರುತ್ತೇನೆ. ದಿನಾಂಕಃ 20.11.2018 ರಂದು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಈ ಪ್ರಕರಣದ ಪಂಚರಾದ ಚಾಸ 7 ಮತ್ತು ಚಾಸ 8 ರವರಿಗೆ ಪಂಚನಾಮೆಗೆ ಸಹಕರಿಸುವಂತೆ ನೋಟಿಸಿ ಜಾರಿ ಮಾಡಿರುತ್ತೇನೆ.

3. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಚಾಸ 7 ಮತ್ತು ಚಾಸ 8 ರವರಿಗೆ ಜಾರಿ ಮಾಡಿದ ನೋಟಿಸ್ ನ ಪ್ರತಿ ಆಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ನಿಪಿ10 ಎಂದು, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ10(ಎ) ಎಂದು ಗುರುತಿಸಲಾಯಿತು.

4. ನಾನು ಚಾಸ7 ಮತ್ತು ಚಾಸ8 ರವರ ಸಮಕ್ಷಮ ಚಾಸ2 ರವರು ಕಬ್ಬಿಣದ ಕತ್ತಿ ಮತ್ತು ದೊಣ್ಣೆಯನ್ನು ತೋರಿಸಿದ್ದನ್ನು ಅಮಾನತ್ತುಪಡಿಸಿಕೊಂಡು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡು ಘಟನಾ ಸ್ಥಳದಲ್ಲಿ ಚಾಸ2 ರವರು ತೋರಿಸಿದ ಘಟನಾ ಸ್ಥಳದಲ್ಲಿ 12 ಗಂಟೆಯಿಂದ 1 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿರುತ್ತೇವೆ ಮತ್ತು ಪಂಚನಾಮೆ ಕಾಲಕ್ಕೆ ಪೊಟೋಗಳನ್ನು ತೆಗೆದು ಕಚ್ಚಾನಕ್ಷೆಯನ್ನು ತಯಾರಿಸಿರುತ್ತೇವೆ.

5. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಘಟನಾ ಸ್ಥಳ ಮತ್ತು ಅಮಾನತ್ತುಪಂಚನಾಮೆಯಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ2 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ2(ಬಿ) ಎಂದು ಗುರುತಿಸಲಾಯಿತು.

6. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಘಟನಾ ಸ್ಥಳದ ಕಚ್ಚಾನಕ್ಷೆಯಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ನಿಪಿ11 ಎಂದು, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ11(ಎ) ಎಂದು ಗುರುತಿಸಲಾಯಿತು. ಘಟನಾ ಸ್ಥಳದಲ್ಲಿ ತೆಗೆದ ಪೊಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ನಿಪಿ3 ಮತ್ತು ನಿಪಿ4 ಎಂದು ಗುರುತಿಸ್ಪಟ್ಟಿರುತ್ತವೆ.

7. ಘಟನಾ ಸ್ಥಳದಲ್ಲಿ ಅಮಾನತ್ತುಪತಿಸಿಕೊಂಡ ಮು.ಮಾಲನ್ನು ನೋಡಿ ಗುರುತಿಸದದಿ್ದು ಅವುಗಳು ಈಗಾಗಲೇ ಎಂ.ಒ 1 ಮತ್ತು ಎಂ.ಒ 2 ಎಂದು ಗುರುತಿಸ್ಪಟ್ಟಿರುತ್ತವೆ. ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡ ಮು.ಮಾಲುಗಳನ್ನು ಠಾಣಾ ಪಿಎಪ್ ನಂ 44/2018 ರಲ್ಲಿ ನೊಂದಾಯಿಸಿ ಮತ್ತು ಅಮಾನತ್ತುಪಡಿಸಿಕೊಂಡ ಮು.ಮಾಲುಗಳನ್ನು ಮಾನ್ಯ ನ್ಯಾಯಾಲಯಕ್ಕೆ ಅಂತಿಮ ಪಟ್ಟಿ ಸಲ್ಲಿಸುವರೆಗೆ ಪೊಲಿಸ್ ವಶದಲ್ಲಿ ಇಟ್ಟುಕೆಳ್ಳುವವರಗೆ ನ್ಯಾಯಾಲಯದ ಅನುಮತಿ ಪಡೆದಿರುತ್ತೇವೆ.

8. ಸದರಿ ಪ್ರಕರಣದ ಚಾಸ2 ರಿಂದ ಚಾಸ6 ರವರ ಹೇಳಿಕೆಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಚಾಸ4 ರಿಂದ ಚಾಸ6 ರವರ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ನಿಪಿ5 ರಿಂದ ನಿಪಿ7 ಎಂದು ಗುರುತಿಸ್ಪಟ್ಟಿರುತ್ತವೆ.

9. ದಿನಾಂಕಃ 22.11.2018 ರಂದು ಸದರಿ ಪ್ರಕರಣದ ತನಿಖೆಯನ್ನು ಮುಂದುವರಿಸಿ ಸದರಿ ಪ್ರಕರಣದ ಆರೋಪಿ 1 ಮತ್ತು 2 ರವರು ಸ್ವ ಇಚ್ಚೆಯಿಂದ ಠಾಣೆಗೆ ಹಾಜರಾಗಿದ್ದು ಸದರಿಯವರನ್ನು ಕಾನೂನು ಅಡಿಯಲ್ಲಿ ಬಿಡುಗಡೆ ಮಾಡಿರುತ್ತೇನೆ. ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಯನ್ನು ಚಾಸ 12 ರವರಿಗೆ ಹಸ್ತಾಂತರಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಡಿ.ಎನ್.ಹೆಚ್ ರವರಿಂದಃ</u>**

1. ನಾನು ಮಹಜರ್ ಗೆ ಹೋದಾಗ ಸಮಯ ಸುಮಾರು 12 ಗಂಟೆ ಆಗಿರುತ್ತದೆ. ಪಂಚರು ಸ್ಥಳದಲ್ಲಿ ಇದ್ದರು ನಾವು ಪಂಚರನ್ನು ಕರೆಸಿರುವುದಿಲ್ಲ. ನಾನು ಸ್ಥಳೀಯರನ್ನು ಪಂಚರಾಗಿ ನೇಮಕ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ.

2. ಘಟನೆ ನಡೆಯಿತು ಎಂಬ ಸ್ಥಳವು ಸರ್ಕಾರಿ ರಸ್ತೆ ಆಗಿರುತ್ತದೆ. ನಾನು ಘಟನಾ ಸ್ಥಳ ಖಾಸಗಿ ಆಸ್ತಿ ಅಥವಾ ಸರ್ವಜನಿಕ ಆಸ್ತಿ ಎಂಬುದರ ಬಗ್ಗೆ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ.

3. ನಾನು ಸರ್ವೆ ನಂ 54 ರ ಪಹಣಿ ಪತ್ರಿಕೆಯನ್ನು ಪರಿಶೀಲನೆ ಮಾಡಿರುವುದಿಲ್ಲ. ಘಟನಾ ಸ್ಥಳವು ಗ್ರಾಮ ಪಂಚಾಯ್ತಿ ರಸ್ತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಂಚನಾಮೆಯಲ್ಲಿ ರಸ್ತೆಯ ಅಗಲವನ್ನು ನಮೂದಿಸಿರುವುದಿಲ್ಲ ಎಂದರೆ ಸರಿ.

4. ನಾನು ಪಂಚನಾಮೆಯನ್ನು ಮತ್ತು ಕಚ್ಚಾನಕ್ಷೆಯನ್ನು ಸ್ಥಳಕ್ಕೆ ಹೋಗಿ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ3 ಮತ್ತು ನಿಪಿ4 ಅನ್ನು ರಮೇಶ್ ಎಂಬುವವರು ತೆಗೆದಿರುತ್ತಾರೆ. ಅದರ ಸಿಡಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಟೋ ತೆಗೆದ ಪೊಲಿಸ್ ಸಿಬ್ಬಂದಿ ರಮೇಶ್ ರವರನ್ನು ಸಾಕ್ಷಿದಾರರನ್ನಾಗಿ ವಿಚಾರಣೆಗೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

5. ನಾನು ಪೊಟೋ ತೆಗೆದ ಬಗ್ಗೆ ಕಲಂ 65 ಬಿ ಭಾರತೀಯ ಸಾಕ್ಷ್ಯ ಅಧಿನಿಯಮದ ಅಡಿಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ನನ್ನ ಮುಂದೆ ಸಾಕ್ಷಿದಾರರು ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

6. ಆರೋಪಿಗಳಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮೇಲಾಧಿಕಾರಿಯವರ ಮಾತು ಕೇಳಿಕೊಂಡು ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.